ದಿನಾಂಕಃ **14.08.2026** ರಂದು ಸಾಕ್ಷಿಗೆ ಪುನಃ ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ವಾದಿಯ ಪರ ಶ್ರೀ ಟಿ ಕೆ ಯು ವಕೀಲರಿಂದಃ

ಈಗ ನಾನು ನೋಡುತ್ತಿರುವ ನಿಪಿ-13(ಎ) ನನ್ನ ರುಜು ಎನ್ನುವುದು ಸರಿ. ನಿಪಿ-13(ಬಿ) (ಎರಡೂ ಪುಟಗಳಲ್ಲಿ) ವಾದಿಯ ಸಹಿ ಎನ್ನುವುದು ಸರಿ. ದಾವಾ ಷೆಡ್ಯೂಲ್ ಸ್ವತ್ತಿನಲ್ಲಿ ಬೆಡ್ಸಿ ಸಂಸ್ಥೆಯ ಘಟಕಗಳು ಇದ್ದು, ಪಶ್ಚಿಮ ಮತ್ತು ದಕ್ಷಿಣಕ್ಕೆ ಶಕ್ತಿಕಂಫರ್ಟ್ ಘಟಕ ಇದೆ ಎಂದರೆ ಸರಿ. ಲಕ್ಷ್ಮೀನಾರಾಯಣ ರವರು ತುಕಾರಾಮ್ ರವರಿಗೆ ನಿಪಿ-5ರ ಪ್ರಕಾರ ಶಕ್ತಿ ಗಾರ್ಮೆಂಟ್ ಪರವಾಗಿ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರು ಎನ್ನುವುದುಕ ಸರಿ. ನಂತರ ಶಕ್ತಿ ಗಾರ್ಮೆಂಟ್ ರವರು ಸದರಿ ಜಾಗದಲ್ಲಿ ಶಕ್ತಿ ಗಾರ್ಮೆಂಟ್ ಘಟಕವನ್ನು ನಡೆಸುತ್ತಿದ್ದರು ಎಂದರೆ ಸರಿ. ಶಕ್ತಿ ಗಾರ್ಮೆಂಟ್ ನವರು ವ್ಯಾಪಾರದಲ್ಲಿ ನಷ್ಟ ಹೊಂದಿದ ನಂತರ ನಿಪಿ-6ರ ಪ್ರಕಾರ ದಾವಾ ಸ್ವತ್ತನ್ನು ನನಗೆ ಮಾರಾಟ ಮಾಡಿದ್ದರು ಎನ್ನುವುದು ಸರಿ.

ಶಕ್ತಿಗಾರ್ಮೆಂಟ್ ರವರು ಕೆ ಎಸ್ ಎಫ್ ಸಿ ಬೆಂಗಳೂರಿನಿಂದ ಪಡೆದಿದ್ದ ಸಾಲ ತೀರುವಳಿ ಮಾಡದ ಹಿನ್ನೆಲೆಯಲ್ಲಿ ಸದರಿ ಆಸ್ತಿ ಹರಾಜಿಗೆ ಬಂದಿತ್ತು ಎನ್ನುವುದುವು ಸರಿ. ದಾವಾ ಸ್ವತ್ತಿನಲ್ಲಿ ಘಟಕ, ಘಟಕದ ಹಿಂಭಾಗ ಗೋ ಡೌನ್, ಮುಂಭಾಗದಲ್ಲಿ ವಾಹನ ಪಾರ್ಕಿಂಗ್ ಜಾಗ ಮತ್ತು ಅದರ ಮೇಲೆ ಮನೆ ಇದೆ ಎನ್ನುವುದು ಸರಿ. ಸದರಿ ಜಾಗ ಪ್ರಸ್ತುತ ಮೌಲ್ಯವೆಷ್ಟು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಮುಂಭಾಗದಲ್ಲಿ ಅಂದರೆ ಪೂರ್ವಕ್ಕೆ ಹಾಲ್ಮುರ್ಕೆ ಮುಖ್ಯ ರಸ್ತೆ ಎನ್ನುವುದು ಸರಿ. ದಾವಾ ಸ್ವತ್ತಿನ ಉತ್ತರಕ್ಕೆ ನನ್ನ ಚಿಕ್ಕಪ್ಪ ಲಕ್ಷ್ಮೀನಾರಾಯಣ ರವರ ಮನೆ ಮತ್ತು ಪ್ಯಾಕ್ಟರಿ ಇದೆ ಎನ್ನುವುದು ಸರಿ. ಲಕ್ಷ್ಮೀನಾರಾಯಣ ಮತ್ತು ಕೃಷ್ಣಯ್ಯ ನಮ್ಮ ಕುಟುಂಬದ ಹಿರಿಯರು ಎಂದರೆ ಸರಿ.

ದಾವಾ ಸ್ವತ್ತು ಹರಾಜಿ ಬಂದಾಗ 3ನೇ ವ್ಯಕ್ತಿಯ ಪಾಲಾಗುವುದು ಬೇಡ ಎಂದು ದಾವಾ ಸ್ವತ್ತನ್ನು ಕೃಷ್ಣಯ್ಯ ರವರೇ ಮುಂದೆ ನಿಂತು ನನ್ನ ಹೆಸರಿಗೆ ಮಾಡಿಸಿದರು ಎನ್ನುವುದು ಸರಿ. ನಿಪಿ-6ರಲ್ಲಿ ತೋರಿಸಿರುವ ಮಾರಾಟಗಾರರ ಹಿರಿಯ ಅಣ್ಣನೇ ವಾದಿ ಎಂದರೆ ಸರಿ. ಶಕ್ತಿಕಂಫರ್ಟ್ ಮತ್ತು ಬೆಡ್ಸಿಸಿ ಕಂಪನಿಯ ವ್ಯವಹಾರವೆಲ್ಲವನ್ನು ವಾದಿಯೇ ನೋಡುತ್ತಿದ್ದರು ಎಂದರೆ ಸರಿ. ಕೃಷ್ಣಯ್ಯ

ರವರ ಮುಂದಾಳತ್ವದಲ್ಲಿ ದಾವಾ ಸ್ವತ್ತನ್ನು ಪುನಃ ವಾದಿಗೆ 24 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡುವ ಸಲುವಾಗಿ ಕ್ರಯದ ಕರಾರು ಕೂಡ ಆಗಿದೆ ಎಂದರೆ ಸರಿಯಲ್ಲ. ಈಗ ನಾನು ನೋಡುತ್ತಿರುವ ನಿಪಿ-13 ಸದರಿ ಕರಾರು ಎಂದರೆ ನಾನು ಮಾಡಿಕೊಟ್ಟಿಲ್ಲ. ನಾನು ಮುಂಚಿನಿಂದಲೂ ಇಂಗ್ಲೀಷ್ ಭಾಷೆಯಲ್ಲಿ ರುಜು ಮಾಡುತ್ತೇನೆ ಎಂದರೆ ಸರಿ. ಯಾವುದೇ ದಾಖಲೆಯನ್ನು ನಾನು ತಿಳಿದು ಕೊಂಡು ಸಹಿ ಮಾಡುತ್ತೇನೆ ಎನ್ನುವುದು ಸರಿ. ನಿಪಿ-11 ಮತ್ತು 12 ರ ನೋಟೀಸ್ ಗಳು ನಿಪಿ-13 ರ ದಾಖಲೆಗೆ ಸಂಬಂಧಿಸಿದ ಕಳುಹಿಸಲಾಗಿದೆ ಎಂಬ ಮಾಹಿತಿ ನನಗೆ ಇದೆ. ಸದರಿ ನೋಟೀಸ್ ಬಂದಾಗ ಕೃಷ್ಣಯ್ಯ ಬದುಕಿದ್ದರು. ನೋಟೀಸ್ ಬಂದ ನಂತರ ನಾನು ಕೃಷ್ಣಯ್ಯ ರವರನ್ನು ಭೇಟಿ ಮಾಡಿದ್ದು, ಅವರು ನನ್ನನ್ನು ಬೆಂಗಳೂರಿಗೆ ಕರೆಸಿದ್ದರು ಎನ್ನುವುದು ಸರಿ. ಸದರಿ ಭೇಟಿಯಲ್ಲಿ ಆಸ್ತಿಯನ್ನು ವಾದಿಗೆ ಕೊಟ್ಟುಬಿಡುವಂತೆ ಕೃಷ್ಣಯ್ಯ ಹೇಳಿದ್ದರು ಎಂದರೆ ಸಾಕ್ಷಿಯು ನಿಪಿ-13 ನ್ನು ಕೃಷ್ಣಯ್ಯನವರಿಗೆ ಕೊಟ್ಟು ಬಿಟ್ಟಿದ್ದೆ, ಅವರು ವಾದಿಗೆ ಏನು ಸಲಹೆ ನೀಡಿದರು ಎಂದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಮತ್ತು ವಾದಿ ವಿಶ್ವಾಸದಲ್ಲಿ ಇದ್ದವೆ ಎಂದರೆ ಮೊದಲು ಇದ್ದೆವು. ನಿಪಿ-13, 24 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದ್ದಾಗಿದೆ ಎಂದು ನನಗೆ ನೋಟೀಸ್ ಪಡೆದ ನಂತರ ಗೊತ್ತಾಯಿತು. ನೋಟೀಸ್ ಬಂದ ನಂತರ ಮತ್ತು ದಾವಾ ಹಾಕಿದ ನಂತರ ನಿಪಿ-13 ರ ಒಕ್ಕಣೆ ಎಲ್ಲವೂ ನನಗೆ ಗೊತ್ತಾಯಿತು ಎನ್ನುವುದು ಸರಿ. ನಿಪಿ-13 ರ ಷೆಡ್ಯೂಲ್ ಅನ್ನು ಗಮನಿಸಿದಾಗ ಅದು ದಾವಾ ಸ್ವತ್ತಿಗೆ ಸಂಬಂಧಿಸಿದ್ದು ಎಂದು ನಾನಾು ತಿಳಿದುಕೊಂಡಿದ್ದೇನೆಂದರೆ ಸಾಕ್ಷಿಯು ಶಕ್ತಿ ಗಾರ್ಮೆಂಟ್ ಗೆ ಸಂಬಂಧಿಸಿದ್ದು ಎಂದು ನುಡಿಯುತ್ತಾರೆ. ಶಕ್ತಿ ಗಾರ್ಮೆಂಟ್ ನ ಘಟಕವೆಲ್ಲವೂ ಈಗಲೂ ಅಲ್ಲಿಯೇ ಇದೆ. ನಿಪಿ-13 ರ ಬಾಬ್ತು ವಾದಿಯು ನನಗೆ 20 ಲಕ್ಷ ರೂಪಾಯಿಗಳಿಗೆ ಮಾತ್ರ ಬಾಕಿ ಇದ್ದಾರೆ ಎಂದರೆ ಸರಿಯಲ್ಲ. ನಾನು, ಲಕ್ಷ್ಮೀನಾರಾಯಣ, ಕೃಷ್ಣಯ್ಯ ಮತ್ತು ವಾದಿ ನಿಪಿ-13 ರ ದಾಖಲೆ ಮಾಡಿದ್ದೇವೆಂದರೆ ಸರಿಯಲ್ಲ. ಈ ವ್ಯವಹಾರದ ಬಾಪ್ತೇ ನನಗೆ ನಿಪಿ-12 ರ ಚೆಕ್ ಬಂದಿತ್ತು ಎಂದರೆ ಜೆರಾಕ್ಸ್ ಮಾತ್ರ ಬಂದಿತ್ತು, ಮೂಲ ಚೆಕ್ ಬಂದಿಲ್ಲ. ಸದರಿ ಜೆರಾಕ್ಸ ನ್ನು ಕೂಡ ನಾನು ಕೃಷ್ಣಯ್ಯ ರವರಿಗೆ ತಲುಪಿಸಿದ್ದೆ ಎನ್ನುವುದು ಸರಿ. ನಿಪಿ-6 ರ ದಾಖಲೆಯು ಕೇವಲ ಆಸ್ತಿಯು 3 ನೆಯವರ ಪಾಲಾಗಬಾರದೆಂಬ ಉದ್ದೇಶದಿಂದ ಕುಟುಂಬದವರೆಲ್ಲರೂ ಸೇರಿ ನನ್ನ ಹೆಸರಿಗೆ ಮಾಡಿಸಿದ ದಾಖಲೆ ಎಂದರೆ ಸರಿಯಲ್ಲ. ನಿಪಿ-6 ರಲ್ಲಿ ತೋರಿಸಿರುವ ಕ್ರಯದ

ಮೊಬಲನ್ನು ಕೃಷ್ಣಯ್ಯ ರವರು ಪಾವತಿಸಿದ್ದರು ಎಂದರೆ ಸರಿಯಲ್ಲ. ನಾನೇ ಪಾವತಿಸಿದ್ದೇನೆ.

ಮುಂಚಿನಿಂದಲೂ ನಾನು ಸಾಫ್ಟ್ ವೇರ್ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದೇನೆ. ನಾನು ಪ್ರತಿ ವರ್ಷ ಆದಾಯ ತೆರಿಗೆ ರಿರ್ಟನ್ ಸಲ್ಲಿಸುತ್ತಿದ್ದೇನೆ. ಈ ದಾವಾ ಸ್ವತ್ತನ್ನು ಖರೀದಿಸಿದ ವಿಚಾರ ಮತ್ತು ಹಣ ಪಾವತಿಸಿದ ವಿಚಾರ ರಿರ್ಟನ್ ನಲ್ಲಿ ತೋರಿಸಿದ್ದೇನೆ. ಶಕ್ತಿ ಗಾರ್ಮೆಂಟ್‌ನ ಪಾಲುದಾರರೆಲ್ಲರೂ ಕೃಷ್ಣಯ್ಯ ರವರ ನೇತೃತ್ವದಲ್ಲಿ ದಾವಾ ಆಸ್ತಿಯನ್ನು ವಾಪಸ್ಸು ಬರೆದುಕೊಡುವಂತೆ ಕೇಳಿದ್ದರು ಎಂದರೆ ಸರಿಯಲ್ಲ. ಈ ಬಾಧ್ಯಸ್ಥಿಕೆಯನ್ನು ತಪ್ಪಿಸಿಕೊಳ್ಳುವ ಸಲುವಾಗಿ ದಾವಾ ಆಸ್ತಿಯನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದೆ ಎಂದರೆ ಸಾಕ್ಷಿಯು ನನ್ನ ತಂದೆಗೆ ಉಷಾರಿರಲಿಲ್ಲ ಈ ಕಾರಣಕ್ಕಾಗಿ ಹಣದ ಮುಗ್ಗಟ್ಟಿನಿಂದ 2 ನೇ ಪ್ರತಿವಾದಿಗೆ ಆಸ್ತಿ ಮಾರಾಟ ಮಾಡಿದ್ದೇನೆಂದು ಸಾಕ್ಷಿ ನುಡಿಯುತ್ತಾರೆ. 2 ನೇ ಪ್ರತಿವಾದಿ ನನ್ನ ಚಿಕ್ಕಮ್ಮ ಅಂದರೆ ಕೃಷ್ಣಯ್ಯ ರವರ ಹೆಂಡತಿ ಎಂದರೆ ಸರಿ. ಆಗ ಕೃಷ್ಣಯ್ಯ ರವರು ಬದುಕಿದ್ದರು. ನಾನು ಮತ್ತು ಶಕ್ತಿಗಾರ್ಮೆಂಟ್ ನ ಪಾಲುದಾರರು ಸರಿಯಾಗಿ ವ್ಯವಹಾರ ಮಾಡುತ್ತಿಲ್ಲವೆಂದು ತನ್ನ ಹೆಸರಿಗೆ ಅಥವಾ ತನ್ನ ಹೆಂಡತಿಯ ಹೆಸರಿಗೆ ಆಸ್ತಿ ಬರೆಯುವಂತೆ ಕೃಷ್ಣಯ್ಯ ರವರು ಹೇಳಿದ ಕಾರಣಕ್ಕಾಗಿಯೇ ನಾನು ದಾವಾ ಸ್ವತ್ತನ್ನು 2 ನೇ ಪ್ರತಿವಾದಿಯ ಹೆಸರಿಗೆ ಕ್ರಯಪತ್ರ ಬರೆದುಕೊಟ್ಟೆ ಎಂದರೆ ಹಣ ಪಡೆದು ಕ್ರಯಪತ್ರ ಬರೆದುಕೊಟ್ಟಿದ್ದೇನೆ. ಕ್ರಯಪತ್ರದಡಿಯಲ್ಲಿ ನನಗೆ ಯಾವುದೇ ಹಣ ಬಂದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 77 ಲಕ್ಷ ರೂಪಾಯಿಗೆ ಮಾರಾಟ ಮಾಡಿದ್ದೇನೆ. ಕ್ರಯಪತ್ರವನ್ನು ತಿಪಟೂರಿನಲ್ಲಿ ನೋಂದಾಯಿಸಲಾಯಿತೆ ಎಂದರೆ ಸಾಕ್ಷಿಯು ನಾವು ಆ ದಿನ ತಿಪಟೂರಿಗೆ ಬಂದಿದ್ದೆವು, ಇಲ್ಲಿ ಅಗಲಿಲ್ಲ ಎಂದು ಬೆಂಗಳೂರಿನಲ್ಲಿ ಮಾಡಿಸಿದ್ದೇವೆ ಎಂದು ನುಡಿಯುತ್ತಾರೆ. ನಾವು ನೋಂದಾವಣೆಗಾಗಿ ತಿಪಟೂರಿಗೆ ಬಂದಾಗ ಶಕ್ತಿಗಾರ್ಮೆಂಟ್ ನ ಪಾಲುದಾರರು ತೊಂದರೆ ಮಾಡಿಕೊಳ್ಳುವುದು ಬೇಡವೆಂದು ತಕರಾರು ತೆಗೆದರು ಎಂದರೆ ಸರಿಯಲ್ಲ. ನಾನು ಪಡೆದ ನಿಪಿ-6 ಗಲೀ, ನಾನು 2 ನೇ ಪ್ರತಿವಾದಿಗೆ ಬರೆದುಕೊಟ್ಟ ಕ್ರಯಪತ್ರವಾಗಲೀ ಯಾವುದೂ ಊರ್ಜಿತವಾದ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಗೆ ಕ್ರಯಪತ್ರ ಆದ ಒಂದು ತಿಂಗಳಲ್ಲಿ ನನಗೆ ವಾದಿಯಿಂದ ನೋಟೀಸ್ ಬಂದಿದೆ ಎನ್ನುವುದು ಸರಿ. ದಾವಾ ಸ್ವತ್ತನ್ನು ವಾದಿಯ ಕುಟುಂಬಕ್ಕೆ ವಾಪಸ್ಸು ನೀಡುವ ಸಲುವಾಗಿ ನಿಪಿ-13 ರ ಕ್ರಯದ ಕರಾರುನ್ನು ಬರೆದುಕೊಟ್ಟಿದ್ದರೂ ಕೂಡ ಈ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ - ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು
ತಿಪಟೂರು.